

بسم اللهِ الرّحمٰن الرّحيم

# ವಾಗ್ದತ್ತ ಮಸೀಹ್ ಮತ್ತು ಮಹ್‌ದಿ – ಹಕಮನ್ ಅದ್‌ಲನ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28-08-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಈ ಕಾಲಘಟ್ಟದಲ್ಲಿ ಅಲ್ಲಾಹನು ತನ್ನ ವಾಗ್ದಾನದ ಪ್ರಕಾರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸ್ಯದಲ್ಲಿ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯನ್ನು ಮುಸ್ಲಿಮರಿಗೆ ಏಕತೆಯನ್ನು ಪ್ರದಾನಿಸಲಿಕ್ಕಾಗಿ ನ್ಯಾಯವಂತ ತೀರ್ಪುಗಾರನನ್ನಾಗಿ ಮಾಡಿ ಕಳುಹಿಸಿರುವನು. ಮುಸ್ಲಿಮರ ಪ್ರತಿಯೊಂದು ಪಂಗಡಗಳಿಂದ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನಲ್ಲಿ ಬಂದು ಸೇರುವುದನ್ನು ಹಾಗೂ ಲಕ್ಷಾಂತರ ಜನರು ಪ್ರತಿ ವರ್ಷ ಜಮಾಅತಿಗೆ ಪ್ರವೇಶಿಸುತ್ತಲೂ ಇರುವುದನ್ನು ನಾವಿಂದು ನೋಡುತ್ತಿದ್ದೇವೆ. ಒಟ್ಟಿನಲ್ಲಿ, ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಲು ನ್ಯಾಯವಂತ ತೀರ್ಪುಗಾರನಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನ ಸ್ಥಾಪನೆಯಾಗಿದೆ. ನಾವು ಸತ್ಯವನ್ನು ಹರಡುವುದನ್ನು ಮತ್ತು ಸತ್ಯವನ್ನು ಹೇಳುವುದನ್ನು ಖಂಡಿತವಾಗಿಯೂ ನಿಲ್ಲಿಸಲಾರೆವು. ಅದಕ್ಕಾಗಿ ನಾವು ತ್ಯಾಗಗಳನ್ನು ಸಹ ಮಾಡುತ್ತಿದ್ದೇವೆ. ಈಗ ನಾವು ಇಸ್ಲಾಮಿನ ಕ್ಯಾಲೆಂಡರಿನ ಮೊದಲ ತಿಂಗಳಾದ ಮುಹರ್ರಮ್ ಮಾಸದಲ್ಲಿದ್ದೇವೆ. ಇಂಗ್ಲಿಷ್ ಕ್ಯಾಲೆಂಡರಿನ ವರ್ಷ ಶುರುವಾಗುವಾಗ ನಾವು ಪರಸ್ಪರ ಶುಭಾಶಯಗಳನ್ನು ಅರ್ಪಿಸುಸುತ್ತೇವೆ. ಆದರೆ ಇಸ್ಲಾಮಿನ ವರ್ಷ ಶುರುವಾಗುವಾಗ ಹಲವು ಮುಸ್ಲಿಮ್ ದೇಶಗಳಲ್ಲಿ ಈ ಪಕ್ಷಗಾರಿಕೆಯ ಕಾರಣದಿಂದ ಕೊಲೆ ಮತ್ತು ದಂಗೆ ನಡೆಯುತ್ತಿವೆ. ಶಾಂತಿ ಮತ್ತು ಸಮಾಧಾನದ ಉನ್ನತ ಪಾಠಗಳನ್ನು ನೀಡುವ ಧರ್ಮವನ್ನು ನಂಬುವವರು ತಮ್ಮ ವರ್ಷದ ಆರಂಭವನ್ನು ಏಕೆ ಕಲಹ, ಫಿತ್ನ, ಕೊಲೆ ಮತ್ತು ದರೋಡೆಗಳೊಂದಿಗೆ ಶುರುಮಾಡುತ್ತಾರೆ ಎಂದು ನಾವು ಯೋಚಿಸಬೇಕಾಗಿದೆ. ನಾವು ನಮ್ಮ ರೀತಿಗಳನ್ನು ಬದಲಾವಣೆ ಮಾಡಬೇಕಾಗಿದೆ. ಮುಸ್ಲಿಮರನ್ನು ಒಂದು ಸಮುದಾಯವನ್ನಾಗಿ ಮಾಡಿ ಈ ಕಲಹಗಳನ್ನು ಮತ್ತು ಭಯೋತ್ಪಾದನೆಗಳನ್ನು ಹೇಗೆ ಕೊನೆಗೊಳಿಸಬಹುದು ಎಂದು ನಾವು ಯೋಚಿಸಬೇಕಾಗಿದೆ. ನಮ್ಮ ನೇತಾರ ಮತ್ತು ಗುರುವಾದ ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತಿನ ಬಗ್ಗೆ ನಮಗೆ ಸುವಾರ್ತೆ ನೀಡಿದ್ದರು. ಅದು ಮುಸ್ಲಿಮರನ್ನು ಒಂದು ಸಮುದಾಯವನ್ನಾಗಿ ಮಾಡುವ ಮಾರ್ಗವೂ ಆಗುವುದು ಮತ್ತು ಮುಸ್ಲಿಮರ ಅಭಿವೃದ್ಧಿ ಹಾಗೂ ಒಗ್ಗಟ್ಟಿನ ಒಂದು ಪ್ರಕಾಶಮಾನವಾದ ದೃಷ್ಟಾಂತವಾಗುವುದು ಎಂದು ಸಹ ಹೇಳಿದ್ದರು. ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಹೇಳಿದ ಚಿಹ್ನೆಗಳು ಈ ಕಾಲಘಟ್ಟದಲ್ಲಿ ಪೂರ್ತಿಯಾಗುತ್ತಿರುವುದಾಗಿ ಅಥವಾ ಪೂರ್ತಿಯಾಗಿದ್ದಾಗಿ ಕಾಣುತ್ತಿರುವಾಗ, ನಾವೇಕೆ ಶಿಯಾ, ಸುನ್ನೀ ಮತ್ತು ವಿವಿಧ ಪಂಗಡಗಳ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿ ನಮ್ಮನ್ನು ಒಂದಾಗಿಸುವ ನ್ಯಾಯವಂತನಾದ ತೀರ್ಪುಗಾರನನ್ನು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನನ್ನು ಹುಡುಕುತ್ತಿಲ್ಲ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಸ್ಥಾನ ಪ್ರವಾದಿಗಳ ಚರ್ಯೆಯ ಪ್ರಕಾರವಾಗಿದೆ. ನನ್ನನ್ನು ಅಲ್ಲಾಹನು ಕಳುಹಿಸಿದ ವ್ಯಕ್ತಿಯೆಂದು ನಂಬುವಾಗ ಮಾತ್ರವೇ ಮುಸ್ಲಿಮರೆಡೆಯಲ್ಲಿ ಇರುವ ಈ ಎಲ್ಲ ಜಗಳಗಳು ಮತ್ತು ಸಕಲ ಕಲಹಗಳು ಒಂದೇ ಕ್ಷಣದಲ್ಲಿ ಬಗೆಹರಿಯುವುದು. ಸತ್ಯವನ್ನು ಕಾಣುವಂತಾಗಲು ನನ್ನ ಬಳಿ ಬನ್ನಿರಿ ಮತ್ತು ನನ್ನ ಮಾತನ್ನು ಆಲಿಸಿರಿ. ಯಾವ ಇಮಾಮರ ಪ್ರತೀಕ್ಷೆಯಲ್ಲಿ ನೀವು ಇರುವಿರೋ ಆ ಇಮಾಂ ನಾನೇ ಆಗಿರುವೆನು. ಅದರ ಸುಬೂತುಗಳನ್ನು ನನ್ನಿಂದ ಕೇಳಿ ತಿಳಿದುಕೊಳ್ಳಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಾಲ್ವರು ಖಲೀಫರ ಉನ್ನತ ಸ್ಥಾನ ಮತ್ತು ಪದವಿಯನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್, ಉಮರ್, ಉಸ್ಮಾನ್, ಅಲಿ ರಝಿಯಲ್ಲಾಹು ಅನ್‌ಹುಮ್‌ರಿಗೆ ಸಮಾನವಾದ ಗುಣವನ್ನು ತನ್ನೊಳಗೆ ಉಂಟುಮಾಡುವ ತನಕ ಯಾವುದೇ ವ್ಯಕ್ತಿ ಮೂಮಿನ್ ಮತ್ತು ಮುಸ್ಲಿಮ್ ಆಗಲಾರನು. ಇವರೆಲ್ಲರೂ ನಮಗೆ ಮಾದರಿ ಪುರುಷರಾಗಿರುವರು ಎಂಬುದು ಅಹ್ಮದಿಯಾ ಜಮಾಅತಿನ ವಿಶ್ವಾಸವಾಗಿದೆ. ಮುಸ್ಲಿಮರ ಭಿನ್ನತೆಯನ್ನು ಕೊನೆಗೊಳಿಸಿ ಅವರಲ್ಲಿ ಒಗ್ಗಟ್ಟು ಉಂಟುಮಾಡಲು ಅಹ್ಮದಿಯಾ ಜಮಾಅತಿಗೆ ಮಾತ್ರ ಸಾಧ್ಯವೆಂದು ಇದರಿಂದ ತಿಳಿಯಬಹುದಲ್ಲವೇ?

ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಗುಣವೈಶಿಷ್ಟ್ಯಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಚ್ಛಾಯೆ ಮತ್ತು ನೆರಳಾಗಿದ್ದರು. ಪೈಗಂಬರರ ಸ್ವಭಾವಗುಣಗಳ ಪ್ರಭಾವ ಅವರಲ್ಲಿ ಬೀರುತ್ತಿತ್ತು. ಅವರ ಹೃದಯ ದೃಢವಿಶ್ವಾಸದ ಪ್ರಕಾಶದಿಂದ ತುಂಬಿತ್ತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹೊರತುಪಡಿಸಿ ಬೇರೆ ಯಾರಲ್ಲಿಯೂ ಕಾಣದಂತಹ ಅತುಲ್ಯವಾದ ಶೌರ್ಯ ಮತ್ತು ಸ್ಥೈರ್ಯವನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ತೋರಿಸಿದ್ದರು. ಅವರ ಜೀವಿತವು ಇಸ್ಲಾಮಿನ ಜೀವಿತವಾಗಿತ್ತು.

ನಾನು ಸತ್ಯವಾಗಿಯೂ ಹೇಳುತ್ತೇನೆ, ಅವರು ಇಸ್ಲಾಮಿಗೆ ಎರಡನೇ ಆದಮ್ ಆಗಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಇಲ್ಲದಿರುತ್ತಿದ್ದರೆ, ಇಸ್ಲಾಮ್ ಸಹ ಇರುತ್ತಿರಲಿಲ್ಲ.

ಅನಂತರ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಸ್ವಭಾವಗುಣ ಮತ್ತು ಅವರ ಪದವಿಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಸ್ಥಾನ ಎಷ್ಟು ಉನ್ನತವಾಗಿತ್ತೆಂದರೆ, ಕೆಲವು ಸಂದರ್ಭಗಳಲ್ಲಿ ಅವರ ಅಭಿಪ್ರಾಯಗಳ ಪ್ರಕಾರ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾಗುತ್ತಿತ್ತು. ಉಮರರ ನೆರಳಿಗೆ ಹೆದರಿ ಶೈತಾನ್ ಓಡಿ ಹೋಗುತ್ತದೆ ಎಂದು ಅವರ ಬಗ್ಗೆ ಹದೀಸಿನಲ್ಲಿ ಬಂದಿದೆ. "ನನ್ನ ನಂತರ ಸಮೀಪ ಕಾಲದಲ್ಲಿ ಯಾರಾದರೂ ನಬಿ ಆಗುತ್ತಿದ್ದರೆ, ಉಮರ್ ಆಗುತ್ತಿದ್ದರು ಎಂದು ಅವರ ಬಗ್ಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು. ಹಿಂದಿನ ಸಮುದಾಯಗಳಲ್ಲಿ ಮುಹದ್ದಸರು ಇದ್ದರು, ಎಂದರೆ ಅಲ್ಲಾಹನೊಡನೆ ಸಂಭಾಷಣೆ ನಡೆಸುವವರಿದ್ದರು, ಈ ಸಮುದಾಯದ ಮುಹದ್ದಸ್ ಉಮರ್ ಆಗಿರುವರು ಎಂದು ಸಹ ಹದೀಸುಗಳಲ್ಲಿ ಬಂದಿದೆ.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಅಬೂಬಕ್ಕರ್, ಹಝ್ರತ್ ಉಮರ್ ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುಮ್‌ರ ಬಗ್ಗೆ ಒಟ್ಟಾಗಿ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಅಲ್ಲಾಹನು ನನಗೆ ತಿಳಿಸಿಕೊಟ್ಟಿರುವನು: ಹಝ್ರತ್ ಅಬೂಬಕ್ಕರ್ ಸಿದ್ದೀಖ್, ಹಝ್ರತ್ ಉಮರ್ ಫಾರೂಖ್ ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುಮ್‌ರವರು ಸಜ್ಜನರು ಮತ್ತು ಮೂಮಿನ್ ಆಗಿದ್ದರು. ಅಲ್ಲಾಹನು ಆಯ್ಕೆ ಮಾಡಿದ ವರಿಷ್ಠ ದಾಸರಲ್ಲಿ ಒಳಪಟ್ಟವರಾಗಿದ್ದರು. ದಯಾವಂತನಾದ ಅಲ್ಲಾಹನ ವರದಾನಗಳಿಂದ ಅವರು ವಿಶಿಷ್ಟರಾಗಿದ್ದರು. ಈ ರೀತಿಯಲ್ಲಿ ಈ ನಾಲ್ಕು ಖಲೀಫರ ಸ್ಥಾನ ಮತ್ತು ಪದವಿಯನ್ನು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಿಳಿಸಿಕೊಟ್ಟಿರುವರು. ಈ ಗೌರವಾದರಗಳನ್ನು ಪ್ರತಿಯೊಬ್ಬ ಮುಸ್ಲಿಮನು ಅವರಿಗೆ ಕೊಡುವಾಗ ಮಾತ್ರವೇ ನಿಜವಾದ ಮುಸ್ಲಿಮನೆಂದು ಕರೆಯಲ್ಪಡುವನು ಮತ್ತು ಪರಸ್ಪರದ ಭಿನ್ನತೆಯನ್ನು ಕೊನೆಗೊಳಿಸಿ ಏಕ ಸಮುದಾಯದ ಭಾಗವಾಗುವನು.

ನಾವಿಂದು ಮುಹರ್ರಮ್ ತಿಂಗಳಲ್ಲಿ ಇದ್ದೇವೆ. ಮುಹರ್ರಮ್ ಹತ್ತರಂದು ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರ ಶಹಾದತಿಗೆ ಸಂಬಂಧಿಸಿ ಶಿಯಾ ವಿಭಾಗದವರು ತಮ್ಮ ಭಾವನೆಗಳನ್ನು ಮತ್ತು ಆವೇಶಗಳನ್ನು ಪ್ರಕಟಿಸುತ್ತಾರೆ. ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರನ್ನು ಶಹೀದ್ ಮಾಡಿದ್ದು ಖಂಡಿತವಾಗಿಯೂ ಒಂದು ದುಷ್ಟ ಕೃತ್ಯವಾಗಿತ್ತು. ಈ ಸಂದರ್ಭದಲ್ಲಿ ಶಿಯಾ ವಿಭಾಗದವರು ತಮ್ಮ ಆವೇಶ ಮತ್ತು ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮತ್ತು ಅವರ ಜಮಾಅತಿನವರು ಪೈಗಂಬರರ ಕುಟುಂಬದ ಸ್ಥಾನವನ್ನು ಅರಿತಿಲ್ಲ ಎಂದು ಭಾವಿಸಲಾಗುತ್ತದೆ. ಅಹ್ಮದಿಯಾ ಜಮಾಅತ್ ಈ ತಪ್ಪುಗ್ರಹಿಕೆಯನ್ನು ಯಾವಾಗಲೂ ದೂರೀಕರಿಸಲು ಪ್ರಯತ್ನಿಸುತ್ತಲೂ ಇರುತ್ತದೆ. ಇಂದು ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೃಷ್ಟಿಯಲ್ಲಿ ಪೈಗಂಬರರ ಕುಟುಂಬದ ಸ್ಥಾನ ಏನಾಗಿತ್ತು ಮತ್ತು ಅವರು ಜಮಾಅತಿಗೆ ಅದರ ಬಗ್ಗೆ ಏನು ಉಪದೇಶವನ್ನು ನೀಡಿದ್ದರು ಎಂಬುದರ ಕುರಿತು ಅವರ ಲಿಖಿತಗಳಿಂದ ಮತ್ತು ವಚನಗಳಿಂದ ಸಂಕ್ಷಿಪ್ತವಾಗಿ ವಿವರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಗ್ರಂಥವಾದ **'ಸಿರ್ರುಲ್ ಖಿಲಾಫ'**ದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಗ್ಗೆ ಹೇಳುತ್ತಾರೆ: ಅವರು ಅಲ್ಲಾಹನ ಸಾಮೀಪ್ಯ ಗಳಿಸಿದ ದಾಸರಲ್ಲಿ ಒಬ್ಬರಾಗಿದ್ದರು. ಅದರೊಂದಿಗೆ ಅವರು ಪವಿತ್ರ ಖುರ್‌ಆನಿನ ಜ್ಞಾನವನ್ನು ಕರಗತ ಮಾಡಿದ ಶ್ರೇಷ್ಠ ಪುರುಷರಲ್ಲಿ ಸೇರಿದ್ದರು. ದಿವ್ಯದರ್ಶನದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ನನ್ನ ಭೇಟಿಯಾಗಿತ್ತು. ಅವರು ಉತ್ತಮ ಮೈಕಟ್ಟಿನ ವ್ಯಕ್ತಿಯಾಗಿದ್ದರು. ಪರಿಪಕ್ವ ಮತ್ತು ದೃಢವಾದ ಸ್ವಭಾವವನ್ನು ಹೊಂದಿದ್ದರು. ನಾನು ಅವರನ್ನು ವಿನಯಾನ್ವಿತರೂ ತೇಜಸ್ವಿಯೂ ಮತ್ತು ಪ್ರಕಾಶಮಯಿಯೂ ಆಗಿ ಕಂಡೆನು. ನಾನು ಆಣೆಹಾಕಿ ಹೇಳುತ್ತೇನೆ, ಅವರು ಬಹಳ ಪ್ರೀತಿ ಮತ್ತು ವಾತ್ಸಲ್ಯದಿಂದ ನನ್ನನ್ನು ಭೇಟಿಯಾದರು. ಅವರು ನನ್ನನ್ನು ಮತ್ತು ನನ್ನ ವಿಶ್ವಾಸಗಳನ್ನು ತಿಳಿದಿರುವರು ಎಂದು ನನಗೆ ಅಲ್ಲಾಹನು ತಿಳಿಸಿಕೊಟ್ಟನು. ಶಿಯಾ ವಿಭಾಗದವರೊಡನೆ ನನಗೆ ಭಿನ್ನಾಭಿಪ್ರಾಯವಿರುವ ವಿಶ್ವಾಸ ಮತ್ತು ಆದರ್ಶಗಳು ಸಹ ಅವರಿಗೆ ಗೊತ್ತಿತ್ತು. ಆದರೆ ಅವರು ಯಾವುದೇ ರೀತಿಯ ಅನಿಷ್ಟತೆ ಮತ್ತು ಅತೃಪ್ತಿಯನ್ನು ತೋರಿಸಲಿಲ್ಲ. ನನ್ನಿಂದ ಅವರು ತನ್ನ ಮುಖವನ್ನು ತಿರುಗಿಸಲಿಲ್ಲ. ಬದಲಿಗೆ ಅವರು ನಿಷ್ಠಾವಂತ ಪ್ರೇಮಿಯ ಹಾಗೆ ಬಹಳ ಪ್ರೀತಿಯಿಂದ ನನ್ನನ್ನು ಭೇಟಿಯಾದರು. ಅವರು ಪರಿಶುದ್ಧ ಹೃದಯ ಹೊಂದಿರುವ ಜನರ ಹಾಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಅವರೊಂದಿಗೆ ಹಸನ್, ಹುಸೈನ್ ರಝಿಯಲ್ಲಾಹು ಅನ್‌ಹುಮ್ ಮತ್ತು ಪ್ರವಾದಿಗಳ ನೇತಾರರಾದ ಖಾತಮುನ್ನಬಿಯ್ಯೀನ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಇದ್ದರು. ಅವರೊಂದಿಗೆ ಅತ್ಯಂತ ಸುಂದರಿಯಾದ, ಸುಶೀಲೆಯಾದ, ಆದರಣೀಯರಾದ, ಅನುಗ್ರಹೀತರಾದ, ಪರಿಶುದ್ಧರಾದ, ಗೌರವಾನ್ವಿತರಾದ, ಸಭ್ಯರಾದ, ಅಂತರಂಗ ಮತ್ತು ಬಹಿರಂಗ ಪ್ರಕಾಶದಿಂದ ಕೂಡಿದ ಯುವತಿಯೂ ಇದ್ದರು. ಅವರು ಬಹಳ ದುಃಖದಿಂದ ಇರುವುದನ್ನು ನಾನು ಕಂಡೆ. ಆದರೆ ಅವರು ತನ್ನ ದುಃಖವನ್ನು ಅಡಗಿಸಿಟ್ಟಿದ್ದರು. ಅವರು ಫಾತಿಮತುಝ್ಝುಹ್‌ರಾ ಆಗಿರುವರು ಎಂದು ನನಗೆ ತಿಳಿಸಲಾಯಿತು. ಅವರು ನನ್ನ ಬಳಿ ಬಂದರು. ನಾನು ಮಲಗಿದ್ದೆ. ಅವರು ನನ್ನ ಸಮೀಪ ಕುಳಿತುಕೊಂಡರು. ಅವರು ನನ್ನ ತಲೆಯನ್ನು ತನ್ನ ಮಡಿಯಲ್ಲಿ ಇರಿಸಿದರು. ನನ್ನೊಡನೆ ವಾತ್ಸಲ್ಯದಿಂದ ವರ್ತಿಸಿದರು. ಅವರು ನನ್ನ ಯಾವುದೋ ದುಃಖದ ಕಾರಣದಿಂದ ದುಃಖಿತರಾಗಿದ್ದರು ಎಂದು ನನಗೆ ಗೊತ್ತಾಯಿತು. ಮಕ್ಕಳ ವೇದನೆಯ ಸಮಯದಲ್ಲಿ ವಾತ್ಸಲ್ಯ, ಕರುಣೆ ಮತ್ತು ಅಸ್ವಸ್ಥತೆ ತೋರಿಸುವ ತಾಯಂದಿರ ಹಾಗೆ ಅವರು ಚಿಂತಿತರಾಗಿದ್ದರು.

ಅನಂತರ, ಧರ್ಮದ ವಿಷಯದಲ್ಲಿ ಹಝ್ರತ್ ಫಾತಿಮಾರೊಡನೆ ನನ್ನ ಸಂಬಂಧ ಪುತ್ರನಂತೆ ಆಗಿದೆ ಎಂದು

ನನಗೆ ತಿಳಿಸಲಾಯಿತು. ತದನಂತರ ಹಸನ್ ಮತ್ತು ಹುಸೈನ್ ಇಬ್ಬರೂ ನನ್ನ ಸಮೀಪ ಬಂದರು. ಸಹೋದರರ ಹಾಗೆ ನನ್ನೊಡನೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದರು. ಸಹಾನುಭೂತಿಯಿಂದ ನನ್ನೊಡನೆ ಭೇಟಿಯಾದರು. ಇದು ನಾನು ಎಚ್ಚರದಲ್ಲಿರುವಾಗಲೇ ಕಂಡ ಒಂದು ದಿವ್ಯದರ್ಶನವಾಗಿತ್ತು. ಇದನ್ನು ನಾನು ಕಂಡು ಬಹಳ ವರ್ಷಗಳು ಕಳೆದುಹೋಗಿವೆ. ನಾನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಅವರ ಇಬ್ಬರು ಮಕ್ಕಳನ್ನು ಪ್ರೀತಿಸುತ್ತೇನೆ. ಅವರನ್ನು ಶತ್ರುಗಳಾಗಿ ಕಾಣುವವರನ್ನು ನಾನು ನನ್ನ ಶತ್ರುಗಳಾಗಿ ಕಾಣುತ್ತೇನೆ.

(ಹುಝೂರ್ ಹೇಳಿದರು:) ನಾವು ಪೈಗಂಬರರ ಕುಟುಂಬವನ್ನು ಪ್ರೀತಿಸುವುದಿಲ್ಲ ಮತ್ತು ಅದರ ಬಗ್ಗೆ ಸರಿಯಾಗಿ ಗ್ರಹಿಸಿಲ್ಲ ಎಂದು ಹೇಗೆ ಹೇಳಬಲ್ಲಿರಿ? ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹುಸೈನ್ ರಝಿಯಲ್ಲಾಹು ಅನ್‌ಹು ಅತ್ಯಂತ ಪರಿಶುದ್ಧರಾಗಿದ್ದರು. ಅಲ್ಲಾಹನು ತನ್ನ ಕೈಯಿಂದಲೇ ಪರಿಶುದ್ಧಗೊಳಿಸಿದ ಮತ್ತು ತನ್ನ ಪ್ರೇಮದಿಂದ ಅನುಗ್ರಹಿಸಿದ ವರಿಷ್ಠದಾಸರಲ್ಲಿ ಅವರು ಸೇರಿರುವರು. ಅವರು ನಿಸ್ಸಂಶಯವಾಗಿಯೂ ಸ್ವರ್ಗದ ನೇತಾರರಲ್ಲಿ ಸೇರಿರುವರು. ಅವರೊಡನೆ ಅಲ್ಪ ಮಾತ್ರವಾದ ಹಗೆ ಇರಿಸುವುದು ಕೂಡ ವಿಶ್ವಾಸ ನಷ್ಟವಾಗಲು ಕಾರಣವಾಗುವುದು. ಆ ಇಮಾಮರ ದೇವಭಕ್ತಿ, ದೇವಾನುರಾಗ, ಸಹನೆ, ಸ್ಥೈರ್ಯ, ಪವಿತ್ರತೆ ಮತ್ತು ಆರಾಧನೆ ನಮಗೆ ಉತ್ತಮವಾದ ಮಾದರಿಯಾಗಿದೆ. ನಾವು ಈ ನಿಷ್ಕಳಂಕರಿಗೆ ಲಭಿಸಿದ ಸನ್ಮಾರ್ಗವನ್ನು ಅನುಸರಿಸುವವರಾಗಿದ್ದೇವೆ. ಅವರ ಶತ್ರುವಾದ ಹೃದಯ ನಾಶವಾಗುವುದು. ಕರ್ಮಪರವಾಗಿ ಅವರೊಡನೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ಹೃದಯ ವಿಜಯಿಯಾಯಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವರ ಬಗ್ಗೆ ಇದ್ದ ಪ್ರೀತಿಯ ಗ್ರಹಿಕೆ ಬೇರೆ ಯಾರಿಗೂ ಇರಲು ಸಾಧ್ಯವಿಲ್ಲ. ಆದರೆ, ಶಿಯಾ ವಿಭಾಗದವರು ಅತಿರೇಕದ ಮಟ್ಟಕ್ಕೆ ಹೋದಾಗ ಅದರ ನೈಜತೆಯನ್ನು ಸಹ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಿಳಿಸಿಕೊಟ್ಟರು. ಅದೇ ರೀತಿಯಲ್ಲಿ ಸುನ್ನೀ ವಿಭಾಗದವರು ತಪ್ಪು ಮಾಡಿದ್ದಲ್ಲಿ, ಅವರೊಡನೆ ಸಹ ಅದನ್ನು ಸರಿಪಡಿಸಲು ಹೇಳಿದರು. ನ್ಯಾಯವಂತನಾದ ತೀರ್ಪುಗಾರನ ಕೆಲಸ ಇದೇ ಆಗಿದೆ. ಇಸ್ಲಾಮಿನ ಸರಿಯಾದ ಅಧ್ಯಾಪನೆಯನ್ನು ಹರಡುವ ಮತ್ತು ಜಾರಿಗೊಳಿಸುವ ಇದೇ ಕೆಲಸಕ್ಕಾಗಿ ಅಲ್ಲಾಹನು ಅವರನ್ನು ಕಳುಹಿಸಿದ್ದರು. ಹೀಗಿದ್ದರೂ ಈ ಪಂಗಡದವರು ಅಹ್ಮದಿಯರನ್ನೇ ದೂಷಿಸುತ್ತಾರೆ. ಆದರೂ ನಾವು ಸಹನೆ ಮತ್ತು ಸ್ಥಿರತೆಯಿಂದ ನಮಗೆ ಒಪ್ಪಿಸಲಾದ ಈ ಕೆಲಸವನ್ನು ಜಾರಿಯಲ್ಲಿರಿಸಬೇಕು. ನೈಜ ಇಸ್ಲಾಮನ್ನು ಲೋಕದಲ್ಲಿ ಹರಡಲು ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡಿದ್ದೇವೆ. ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹು ಮಾಡಿತೋರಿಸಿದ ಮಾದರಿಯನ್ನು ತಮ್ಮ ಮುಂದಿರಿಸಬೇಕು.

ಈಗ ವಿಶೇಷವಾಗಿ ಈ ತಿಂಗಳಲ್ಲೂ ಮತ್ತು ಯಾವಾಗಲೂ ನಾವು ದುಆ ಮಾಡುತ್ತಿರಬೇಕು. ದುರೂದ್ ಪ್ರಾರ್ಥನೆ ಹೆಚ್ಚಾಗಿ ಮಾಡುತ್ತಿರಬೇಕು. ನಾವು ಅಲ್ಲಾಹನ ಮುಂದೆ ಎಷ್ಟು ಹೆಚ್ಚು ಬಾಗುತ್ತೇವೋ ಅಷ್ಟೇ ಬೇಗನೇ ಅಲ್ಲಾಹನು ನಮಗೆ ವಿಜಯ ಮತ್ತು ಯಶಸ್ಸನ್ನು ಪ್ರದಾನ ಮಾಡುವನು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(*atba*)

*At, Masjid Mubarak, Islamabad, Tilford, UK, On 28-08-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon